# ನಾವು ಆವೃತ್ತಚಕ್ಷುಗಳಾಗೋಣ

ಉಪನಿಷತ್ತು ಎಂದರೆ ಏನು? ಈ ಪ್ರಶ್ನೆಗೆ ಸೂಕ್ತವಾದ ಉತ್ತರವೆಂದರೆ 'ರಹಸ್ಯವಿದ್ಯೆ' ಎಂದೇ ಹೇಳಬೇಕು. ಇದು ಆಚಾರ್ಯನ ಮಗ್ಗುಲಲ್ಲಿ ಕುಳಿತು ಕಲಿಯುವ ವಿದ್ಯೆ. ಇದು ನಮಗೆ ಪರಮಾನಂದವನ್ನು ಕೊಡುತ್ತದೆ. ನಾವು ಸಾಗುವ ದಾರಿಯಲ್ಲಿ ನೂರಾರು ವಿಘ್ನಗಳು ಬರುತ್ತವಷ್ಟೆ. ಅವುಗಳನ್ನು ಹೋಗಲಾಡಿಸಿ ನಮಗೆ 'ಆನಂದ'ವನ್ನು ತಂದುಕೊಡುವುದೇ ಉಪನಿಷತ್ತುಗಳ ಉದ್ದೇಶ. ಉಪನಿಷತ್ತು, ನಮಗೆ ರಹಸ್ಯವನ್ನು ಕರಗತ ಮಾಡಿಕೊಡುವ ವಿದ್ಯೆಯನ್ನು ತಿಳಿಸಿಕೊಡುತ್ತದೆ. ಆ ವಿದ್ಯೆಯನ್ನು ಬಲ್ಲವರು ಆ ರಹಸ್ಯವನ್ನು ಪಡೆಯುತ್ತಾರೆ. ಆ ರಹಸ್ಯವನ್ನು ಪ್ರಾಚೀನರು 'ಆನಂದ' ಎಂದು ಕರೆದರು. ನಾವು ಅದನ್ನೇ 'ಬ್ರಹ್ಮಾನಂದ' ಎಂದು ಕರೆಯುತ್ತೇವೆ. ಈ ಬ್ರಹ್ಮವನ್ನು ತಿಳಿಸುವ ಶಾಸ್ತ್ರಕ್ಕೆ 'ವೇದಾಂತ' ಎಂದು ಹೆಸರು. ನಮಗೆಲ್ಲ ತಿಳಿದಿರುವಂತೆ 'ವೇದ' ಎಂದರೆ ಜ್ಞಾನ, ತಿಳಿವಳಿಕೆ, ಅದರ ಕೊನೆ ಎಂದೇ ಅರ್ಥ. ಅದ್ದರಿಂದ ಬ್ರಹ್ಮಜ್ಞಾನವು ವೇದಾಂತ. ಅದನ್ನು ಬೋಧಿಸುವ ಶಾಸ್ತ್ರವೂ ವೇದಾಂತವಾಗುವುದು ಸುನಿಶ್ಚಿತ.

ಹೀಗಾಗಿ, ಇಂಥ ಉಪನಿಷತ್ತುಗಳು ಪ್ರಮುಖವಾಗಿ ಹತ್ತು. ಕೆಲವರು ಹದಿನೆಂಟೆಂದು ಹೇಳುವುದುಂಟು. ಆದರೆ, ಈ ಸಂಖ್ಯೆ ಬೆಳೆದು ನೂರೆಂಟು ಉಪನಿಷತ್ತುಗಳು ನಮ್ಮಲ್ಲಿ ಬಳಕೆಯಲ್ಲಿವೆ. ಇಂಥ ಉಪನಿಷತ್ತುಗಳು ಅರ್ಥವಾಗುವುದು ಅಷ್ಟು ಸುಲಭವಲ್ಲ. ಗುರುವು ಶಿಷ್ಯನನ್ನು ಮಗ್ಗುಲಲ್ಲಿ ಕುಳ್ಳಿರಿಸಿಕೊಂಡು ಕಲಿಸುತ್ತಿದ್ದುದು ಸರಿಯಷ್ಟೆ. ಆದುದರಿಂದ ಎಷ್ಟೋ ಗುಟ್ಟುಗಳು ಅವುಗಳಲ್ಲಿ ಇರುತ್ತಿದ್ದುದುಂಟು. ಗುಟ್ಟಾಗಿ ಹೇಳುವ ಮಾತುಗಳು ಗುಟ್ಟಾಗಿಯೇ ಇರುವುದು ಸಹಜ. ಇಂಥ ಗುಟ್ಟಾದ ಉಪನಿಷತ್ತುಗಳಲ್ಲಿ ಪ್ರಮುಖವಾದ ಹತ್ತು ಉಪನಿಷತ್ತುಗಳಿಗೆ ಆಚಾರ್ಯತ್ರಯರು ಭಾಷ್ಯಗಳನ್ನು ಬರೆದಿದ್ದಾರೆ. ಈಗಲೂ ಸಹಸ್ರಾರು ಜನರು ಈ ಭಾಷ್ಯಗಳ ಮೂಲಕವೇ ಉಪನಿಷತ್ತುಗಳನ್ನು ಅಧ್ಯಯನವನ್ನು ಮಾಡುತ್ತಿದ್ದಾರೆ; ಕೃತಾರ್ಥರಾಗುತ್ತಿದ್ದಾರೆ. ಇದೇನೊ ಸರಿ. ಈ ಕಾಲದ ವಿದ್ವಾಂಸರು 'ಈ ಭಾಷ್ಯಗಳು ಉಪನಿಷತ್ತುಗಳ ಅರ್ಥವನ್ನು ವಿವರಿಸುವುದಕ್ಕಾಗಿ ಹುಟ್ಟಿರುವುದೆಂದೂ ಆದ್ದರಿಂದ ಈ ಭಾಷ್ಯಗಳ ಸಹಾಯವನ್ನು ಪಡೆದು ಉಪನಿಷತ್ತುಗಳ ಅರ್ಥವನ್ನು ಸ್ವತಂತ್ರವಾಗಿ ಮಾಡಿಕೊಳ್ಳೋಣವೆಂದೂ ಹೇಳುತ್ತಾರೆ.' ಆದರೆ, ಪ್ರಾಚೀನರು ಈ ಮಾತನ್ನು ಒಪ್ಪುವುದಿಲ್ಲ. ಅವರು ಗುರುಸಂಪ್ರದಾಯದಲ್ಲಿ ಒಂದು ಗುಟ್ಟಿದೆ. ನಾವು ಅದನ್ನು ಮೊದಲು ತಿಳಿಯದಿದ್ದರೆ ಉಪನಿಷತ್ತುಗಳು ಅರ್ಥವೇ ಆಗುವುದಿಲ್ಲವೆಂದು ಹೇಳುತ್ತಾರೆ. ಇಲ್ಲಿ ಆಚಾರ್ಯರಾದ ಶಂಕರ, ರಾಮಾನುಜ ಮತ್ತು ಮಧ್ವರ ಭಾಷ್ಯಗಳನ್ನೇ ನಾವು ಚೆನ್ನಾಗಿ ತಿಳಿಯಬೇಕು ಎಂಬ ಮಾತನ್ನು ಒಪ್ಪಬೇಕಾದದ್ದೇನೊ ಸರಿ! ಇಲ್ಲಿ ದ್ವೈತಾದ್ವೈತ, ವಿಶಿಷ್ಟಾದ್ವೈತಗಳ ಹೆಚ್ಚುಗಾರಿಕೆಗಳ ಬಗೆಗೆ ನಾವು ಈಗ ಹೋರಾಟ ಮಾಡಬೇಕಿಲ್ಲ. ನಾವು ಮಧ್ಯಸ್ಥವಾದಿಗಳಾಗಬೇಕಾಗಿದೆ. ಈಗ ಜಗತ್ತು ಒಂದಾಗಬೇಕಾಗಿದೆ. ಈ ಕಾಲದಲ್ಲಿ ಗೋಡೆಗಳನ್ನು ಎಬ್ಬಿಸುವುದರಲ್ಲಿ ಯಾವ ಅರ್ಥವೂ ಇಲ್ಲ. ನಾವು ಗೋಡೆಗಳನ್ನು ತೆಗೆಯಬೇಕೆಂಬ ಮಾತು ನಮಗೆ ಹೆಚ್ಚು ಪ್ರಿಯವಾಗಬೇಕಾಗಿದೆ. ನಾವು ಗೋಡೆಗಳ ಮರೆಯಲ್ಲಿ ಅಡಗಿ ಕುಳಿತುಕೊಳ್ಳಬೇಕಾಗಿಲ್ಲ. ನಾವೀಗ ಬಯಲ ನಡುವೆ ನೆಲೆಯನ್ನು ಕಾಣಬೇಕಾಗಿದೆ.

ನಾವು ಇಂಥ ನಿಲುವನ್ನು ತಾಳುವುದೇ ಸೂಕ್ತ. 'ನಮ್ಮ ಪೂರ್ವಿಕರ ಸಿದ್ಧಾಂತ ನಮ್ಮದು' ಎಂದು ಹೊರಡುವುದನ್ನು ಬಿಟ್ಟು ನಾವು ಅಧ್ಯಯನದಲ್ಲಿ ತೊಡಗಬೇಕಾಗಿದೆ. ಇದು ಬರಿ ಓದಾಗಕೂಡದು ಅಷ್ಟೆ. ಶುದ್ಧವಾದ ಮನೋಬುದ್ಧಿಗಳು ಆತ್ಮಪ್ರೇರಣೆಯಿಂದ ಸರಿಯಾದ ದಾರಿಯನ್ನು, ಸರಿಯಾದ ಅಧ್ಯಯನದ ಮೂಲಕವೇ ಹಿಡಿಯಬೇಕಾಗಿದೆ. ಆ ಮಾರ್ಗದಲ್ಲಿ ನಾವು ನಡೆದು ಗುರುದೇವ ಕೃಪೆಯನ್ನು ಸಂಪಾದಿಸಿ ಕೃತಾರ್ಥರಾಗಬೇಕಾಗಿದೆ. ಇದೇ ಇಂದಿನ ಮಾರ್ಗವಾಗಬೇಕು ಅಲ್ಲವೇ?

ಈ ಹಿಂದೆ 'ನಮ್ಮ ಪೂರ್ವಿಕರ ಸಿದ್ಧಾಂತ ನಮ್ಮದು' ಎಂದು ಹೇಳಿದ್ದೇನೊ ಆಯಿತು. ಇದು ಧರ್ಮಸಿದ್ಧಾಂತ. ಧರ್ಮವು ನಮ್ಮೆದುರಿಗೆ ಇರುವ ಪದಾರ್ಥವಲ್ಲ. ಅದು ಭವಿಷ್ಯದಲ್ಲಿ ಸಾಧ್ಯವಾಗುವ ವಿಷಯ. ಅಲ್ಲಿ ಪೂರ್ವಪದ್ಧತಿಯು ಬೇಕಾಗುತ್ತದೆ. ಈ ಮಾತನ್ನು ಒಪ್ಪೋಣ. ಆದರೆ, 'ಬ್ರಹ್ಮವಿಚಾರ'ಕ್ಕೆ ಇದು ಅನ್ವಯವಾಗುವುದಿಲ್ಲ. ಬ್ರಹ್ಮವು ಸಿದ್ಧವಾದುದೇ ಸರಿ. ಈ ಬ್ರಹ್ಮ ಎಲ್ಲೆಲ್ಲಿಯೂ ಉಂಟು. ಇದು ಆವೃತ್ತಚಕ್ಷುವಾಗುವ ವಿಧಾನ. ಇಲ್ಲಿ ನಮ್ಮ ಪೂರ್ವಿಕರ ಸಿದ್ಧಾಂತ ನಮ್ಮದೆಂದು ಹೇಳುವ ಮಾತು ಅಷ್ಟು ಹೊಂದಿಕೆಯಾಗುವುದಿಲ್ಲ. ಈ ಎಚ್ಚರ ನಮಗೆ ಬೇಕಾಗುತ್ತದೆ. ನಮ್ಮ ಮೂವರು ಆಚಾರ್ಯರು "ಲುಪ್ತವಾಗಿದ್ದ ಪೂರ್ವಸಿದ್ಧಾಂತವನ್ನು ಪ್ರತಿಷ್ಠಿಸಿದರು" ಎಂದು ನಾವು ಹೇಳುತ್ತೇವೆ. ಈ ಮಾತನ್ನು ನಾವು ಮರೆಯಕೂಡದು ಅಷ್ಟೆ.

ನಮಗೆ ಈಗ ಬೇಕಿರುವುದು ಇಳಿ ಬಿದ್ದಿರುವ ಶ್ರುತಿಯ ತಂತಿಯನ್ನು ಬಿಗಿ ಮಾಡಿ ಶ್ರುತಿಗೊಳಿಸುವ ಕ್ರಮವೇ ಹೊರತು ಅನ್ಯಥಾ ಬೇರೇನೂ ಅಗತ್ಯವಿಲ್ಲವೆಂದು ತೋರುತ್ತದೆ. ನಾವು ಹೋರಾಡುವ ಸಿದ್ಧಾಂತಗಳನ್ನು ಕೈಬಿಟ್ಟು ಸಮನ್ವಯ ಸಿದ್ಧಾಂತವನ್ನು ಈಗ ಭದ್ರವಾಗಿ ಹಿಡಿಯಬೇಕಾಗಿದೆ. 'ಸಮನ್ವಯ ಸಿದ್ಧಾಂತ'ವು ತೆರೆದ ಮನಸ್ಸಿನ ವಿಚಾರಲಹರಿ! ನಮಗೀಗ ಸಮನ್ವಯವೇ ಬೇಕಾದದ್ದು. ಭಗವಾನ್ ಬಾದರಾಯಣರು 'ಬ್ರಹ್ಮಸೂತ್ರ'ದ ನಾಲ್ಕು ಅಧ್ಯಾಯಗಳಲ್ಲಿ ಮೊದಲನೆಯ ಹೆಸರೇ 'ಸಮನ್ವಯ' ಎಂದಿರುವುದನ್ನು ನಾವು ಸೂಕ್ಷ್ಮವಾಗಿ ಗಮನಿಸಬೇಕು. ಅನಂತರ 'ಅವಿರೋಧ' ಎಂಬುದು ಎರಡನೆಯ ಅಧ್ಯಾಯದ ಹೆಸರು. ನಾವು ಆವೃತ್ತಚಕ್ಷುಗಳಾದರೆ 'ಸಮನ್ವಯ' ಭಾವವು ನಮ್ಮೊಡನೆ ನೆಲೆಯೂರಲು ಸಾಧ್ಯವಾಗುತ್ತದೆ. ನಾವು ಉಪನಿಷತ್ತುಗಳನ್ನು 'ಸಮನ್ವಯ'ದ ನೆಲೆಯಲ್ಲೆ ಅನುಸಂಧಾನ ಮಾಡಬೇಕಾಗಿದೆ. ಇದು ಒಳಗಣ್ಣನ್ನು ತೆರೆದುಕೊಳ್ಳುವ ಪರಮವಿಧಾನವೇ ಸರಿ. ಇದು ಇಂದು ನಾವು ಸಾಗಬೇಕಾದ ದಾರಿ!

■ ಪುರಂಜೀವಿ

## ಮಾತೇ ಮುತ್ತು

❖ ನಾನು ಯೋಚಿಸುತ್ತೇನೆ; ಆದ್ದರಿಂದ ನಾನು ಇದ್ದೇನೆ.

—ಡೆಸ್ಕಾರ್ ಟೆಸ್

❖ ನೀಚನಲ್ಲಿ ಸೇರಿರುವ ಸಂಪತ್ತು ಯಾರ ಸುಖಕ್ಕೂ ಬಾರದು.

—ಸುಭಾಷಿತ

❖ ಲೋಪುಗಳಿಂದಲೇ ದೊಡ್ಡವರು ರೂಪಗೊಂಡಿದ್ದಾರೆ.

—ಷೇಕ್ಸ್‌ಪಿಯರ್

❖ ಕಷ್ಟದ ದಿನಗಳಲ್ಲಿ ಕಲಿಯುವ ನೀತಿ ಸುಖದ ದಿನಗಳಿಂದ ಸಾಧ್ಯವಿಲ್ಲ.

—ಜೋಸೆಫ್ ಕೆನಡಿ

❖ ನಾನು ಬುದ್ಧಿವಂತನಲ್ಲ ಎಂದುಕೊಂಡವನೂ ಬುದ್ಧಿವಂತನಾಗಬಲ್ಲ.

—ಪಿ.ಸೈರಸ್

❖ ಹಾವು ತಿಂದವರ ನುಡಿಸಬಹುದು, ಗರ ಹೊಡೆದವರ ನುಡಿಸಬಹುದು, ಸಿರಿಗರ ಹೊಡೆದವರ ನುಡಿಸಬಾರದು ನೋಡಯ್ಯ!

—ಬಸವಣ್ಣ

❖ ಬಂದೂಕ ಬಾಯಿ, ಯುದ್ಧ ವಿಮಾನ... ಎಲ್ಲವೂ ಮಾನವಕೋಟಿಯ ಅಪಜಯದ ಧ್ವಜಗಳು.

—ಲಿಂಡನ್ ಜಾನ್‌ಸನ್

❖ ಯಾರು ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವರೋ ಅವರ ಬದುಕು ನಿಜಕ್ಕೂ ಸಾರ್ಥಕ.

—ಸ್ವಾಮಿ ವಿವೇಕಾನಂದ

❖ ಬಡತನವೇ ಕ್ರಾಂತಿ ಹಾಗೂ ಅಪರಾಧಗಳ ತಾಯಿ–ತಂದೆ.

—ಅರಿಸ್ಟಾಟಲ್

❖ ಪರಮೋನ್ನತಿಗೆ ಪತನವೇ ಕೊನೆ.

—ಮಹಾಭಾರತ

❖ ರಾಷ್ಟ್ರವು ಮತ್ತೊಮ್ಮೆ ಸ್ವಾತಂತ್ರ್ಯವನ್ನು ಕಳೆದುಕೊಂಡರೆ ಅದು ಅಸಮಾನತೆಯ ಮುಂದುವರಿಕೆಯಿಂದ ಮಾತ್ರ.

—ಡಾ.ಬಿ.ಆರ್. ಅಂಬೇಡ್ಕರ್